# ನಾಗರಿಕ ಪ್ರತಿರೋಧದ ಟ್ರೈಫೆಕ್ಟಾ: ಏಕತೆ, ಯೋಜನೆ, ಶಿಸ್ತು

## The Trifecta of Civil Resistance: Unity, Planning, Discipline

**Hardy Merriman**

OpenDemocracy.net, November 19, 2010
Translation: April 2018

# TRANSLATOR'S NOTES

openDemocracy
free thinking for the world

# ಮುಕ್ತ ಪ್ರಜಾಪ್ರಭುತ್ವ

## ಜಾಗತಿಕ ಸ್ವತಂತ್ರ ಆಲೋಚನೆ

*ಮುಕ್ತ ಪ್ರಜಾಪ್ರಭುತ್ವದ ಮೇಲೆ ಪ್ರಕಟಿಸಲಾಗಿದೆ. (http://www.opendemocracy.net)*

## ನಾಗರಿಕ ಪ್ರತಿರೋಧದ ಟ್ರೈಫೆಕ್ಟಾ: ಏಕತೆ, ಯೋಜನೆ, ಶಿಸ್ತು

ಹಾರ್ಡಿ ಮೆರಿಮನ್, 19 ನವೆಂಬರ್ 2010

ಜಾಗತಿಕವಾಗಿ ಅಹಿಂಸಾತ್ಮಕ ಚಳವಳಿಗೆ ಮೂರು ಗುಣಗಳು ಯಶಸ್ಸು ಮತ್ತು ವೈಫಲ್ಯದ ನಡುವೆ ವ್ಯತ್ಯಾಸವನ್ನು ತರಬಲ್ಲವು: ಏಕತೆ, ಯೋಜನೆ ಮತ್ತು ಅಹಿಂಸಾತ್ಮಕ ಶಿಸ್ತು.

**ಲೇಖಕರ ಬಗ್ಗೆ**

ಹಾರ್ಡಿ ಮೆರಿಮನ್ ಅವರು 2005ರಿಂದ 2007ರವರೆಗೆ ಐಸಿಎನ್‌ಸಿಯ ಪ್ರೋಗ್ರಾಮ್ಸ್ ಮತ್ತು ರೀಸರ್ಚ್ ನಿರ್ದೇಶಕರಾಗಿದ್ದರು. ಅವರು "ಅಹಿಂಸಾತ್ಮಕ ಹೋರಾಟ ಕಟ್ಟುವುದು: 20ನೇ ಶತಮಾನದ ಅಭ್ಯಾಸ ಮತ್ತು 21ನೇ ಶತಮಾನದ ಸಾಮರ್ಥ್ಯ" ಎನ್ನುವ ಜೀನ್ ಶಾರ್ಪ್ ಅವರ ಪುಸ್ತಕವನ್ನು ಸಂಪಾದಿಸಿದ್ದಾರೆ, ಅಲ್ಲದೆ "ಪರಿಣಾಮಾತ್ಮಕ ಅಹಿಂಸಾತ್ಮಕ ಹೋರಾಟಕ್ಕೆ ಒಂದು ಮಾರ್ಗದರ್ಶಿ" ಎನ್ನುವ ಪುಸ್ತಕದ ಸಹಲೇಖಕ.

**ಅಹಿಂಸಾತ್ಮಕ ನಾಗರಿಕ ಪ್ರತಿರೋಧ ಪರಿಣಾಮಕಾರಿಯಾಗುವುದು ಹೇಗೆ?**

ರಾಜಕೀಯದಲ್ಲಿ "ಅಧಿಕಾರವನ್ನು ಎಂದೂ ಕೊಡಲಾಗುವುದಿಲ್ಲ. ಯಾವಾಗಲೂ ತೆಗೆದುಕೊಳ್ಳಬೇಕಾಗುತ್ತದೆ" ಎನ್ನುವ ನಾಣ್ಣುಡಿಯನ್ನು ನಾವು ಒಪ್ಪಿಕೊಂಡಲ್ಲಿ ಅಗತ್ಯವಿರುವ ಮುಕ್ತಾಯವು, ಐತಿಹಾಸಿಕ ಅಹಿಂಸಾತ್ಮಕ ಚಳವಳಿಗಳು ಯಶಸ್ಸು ಪಡೆಯಲು ಕಾರಣ, ಕೆಲವೊಮ್ಮೆ, ಅವು ತಮ್ಮ ವಿರೋಧಿಗಳಿಗಿಂತ ಹೆಚ್ಚು ಶಕ್ತಿಯನ್ನು ಪಡೆದುಕೊಂಡಿರುತ್ತವೆ. ಆದರೆ ಈ ಮುಕ್ತಾಯವು ಕೆಲವು ವಿಚಾರಗಳಲ್ಲಿ ವ್ಯತಿರಿಕ್ತವಾಗಿರುತ್ತದೆ ಮತ್ತು ವ್ಯಾಪಕವಾಗಿ ನಂಬಲಾಗಿರುವ ಅಂದಾಜನ್ನು ಪ್ರಶ್ನೆ ಮಾಡುವ ನೇರ ಹಾದಿಯನ್ನು ತೆರೆಯುತ್ತದೆ. ಅಂದರೆ ಶಕ್ತಿಯು ಅಂತಿಮವಾಗಿ ಸಂಪನ್ಮೂಲಗಳ ವಿಷಯಗಳು ಮತ್ತು ಅಹಿಂಸೆಯ ಸಾಮರ್ಥ್ಯದ ನಿಯಂತ್ರಣದಿಂದ ಹುಟ್ಟುಪಡೆದುಕೊಳ್ಳುತ್ತದೆ ಎನ್ನುವ ಅಂದಾಜು. ಈ ಅಂದಾಜು ಸಂಪೂರ್ಣವಾಗಿ ಸರಿಯಾಗಿದ್ದರೆ, ಅಹಿಂಸಾತ್ಮಕ ಚಳವಳಿಗಳು ಹೆಚ್ಚು ಸಶಸ್ತ್ರ ಮತ್ತು ಸಂಪನ್ಮೂಲ ಹೊಂದಿರುವ ವಿರೋಧಿಗಳ ಮುಂದೆ ವಿಫಲವಾಗಲಿದೆ. ಆದರೆ ಇತಿಹಾಸವು ನಮಗೆ ತೋರಿಸುವುದೇನೆಂದರೆ, ಹಲವು ಯಶಸ್ವೀ ಅಹಿಂಸಾತ್ಮಕ ಚಳವಳಿಗಳ ಕಾಲಾವಧಿಯಲ್ಲಿ, ಶತಮಾನಗಳಿಗೆ ಹಿಂದಿನಿಂದ ಗಮನಿಸಿಕೊಂಡು ಬಂದರೆ,

ಮುಂದಾಳುಗಳು ಮತ್ತು ಕಾರಣಗಳು ಮಾನವತೆಯಷ್ಟೇ ವ್ಯತ್ಯಾಸವನ್ನು ಹೊಂದಿದೆ. ಕೆಲವು ಉದಾಹರಣೆಗಳನ್ನು ಪಟ್ಟಿಮಾಡಿದಲ್ಲಿ:

- 1930 ಮತ್ತು 1940ರಲ್ಲಿ ಭಾರತೀಯರು ವ್ಯಾಪಕ ಅಸಹಕಾರ ಚಳವಳಿಯ ಮೂಲಕ (ಆರ್ಥಿಕ ಬಹಿಷ್ಕಾರ, ಶಾಲಾ ಬಹಿಷ್ಕಾರ, ಮುಷ್ಕರಗಳು, ಕರ ನಿರಾಕರಣೆ, ನಾಗರಿಕ ಅಸಮ್ಮತಿ, ರಾಜೀನಾಮೆಗಳು) ತಮ್ಮ ಸ್ವಾತಂತ್ರ್ಯ ಹೋರಾಟವನ್ನು ಮಾಡಿ ಗೆದ್ದರು. ಇದು ಭಾರತವನ್ನು ಆಳಲು ಸಾಧ್ಯವಾಗದೆ ಇರುವ ದೇಶವಾಗುವ ಬೆದರಿಕೆ ಒಡ್ಡಿ ನಂತರ ಬ್ರಿಟಿಷರು ದೇಶವನ್ನು ಬಿಟ್ಟು ಹೊರ ಹೋಗುವಂತೆ ಒಪ್ಪಿಸಿತು;

- 1950 ಮತ್ತು 1960ರ ನಡುವೆ ಅಮೆರಿಕ ನಾಗರಿಕ ಹಕ್ಕುಗಳ ಚಳವಳಿ ಸಮಾನ ಹಕ್ಕುಗಳನ್ನು ಅಹಿಂಸಾತ್ಮಕ ಅಭಿಯಾನಗಳಿಂದಲೇ ಪಡೆದುಕೊಂಡಿತು. ಅಂದರೆ ಸಾಂಸ್ಥಿಕವಾದ ಪ್ರತ್ಯೇಕತೆಯ ವ್ಯವಸ್ಥೆಯ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ಮೊಂಟೊಗೊಮ್ರಿ ಬಸ್ಸು ಬಹುಷ್ಕಾರಗಳು ಮತ್ತು ನಾಶ್‌ವಿಲ್ಲೆ ಲಂಚ್ ಕೌಂಟರ್ ಸಿಟಿನ್‌ಗಳಿಗೆ ರಾಷ್ಟ್ರವ್ಯಾಪಿ ಬೆಂಬಲವನ್ನು ತಂದುಕೊಟ್ಟಿತು;

- 1965–1970 ನಡುವೆ, ಯುನೈಟೆಡ್ ಫಾರ್ಮ್ ವರ್ಕರ಼್ಸ್ ಯೂನಿಯನ್ ಸಣ್ಣ, ವಾಸ್ತವದಲ್ಲಿ ಅನುದಾನವಿಲ್ಲದ ಸ್ಥಳೀಯ ಸಂಘಟನೆಯಿಂದ ಒಂದು ರಾಷ್ಟ್ರೀಯ ಅಸ್ತಿತ್ವವಿರುವ ಸಂಸ್ಥೆಯಾಗಿ ಕ್ಯಾಲಿಫೋರ್ನಿಯ ದ್ರಾಕ್ಷಿ ವಿನಿಯಾರ್ಡ್‌ಗಳ ವಿರುದ್ಧ ತಮ್ಮ ಮುಷ್ಕರ ಮತ್ತು ಬಹಿಷ್ಕಾರಗಳ ಯಶಸ್ವೀ ಬಳಕೆಯಿಂದ ಯಶಸ್ವಿಯಾಗಿದ್ದವು;

- 1986ರಲ್ಲಿ ಫಿಲಿಪ್ಪೀನ್ಸ್‌ನಲ್ಲಿ ಕಾರ್ಯಕರ್ತರು ಸೇನಾ ಬಂಡಾಯಗಾರರ ಜೊತೆಗೂಡಿ ಲಕ್ಷಾಂತರ ಜನರನ್ನು ಒಗ್ಗೂಡಿಸಿ ಅಮೆರಿಕ ಪ್ರೇರಿತ ಸರ್ವಾಧಿಕಾರಿ ಫೆರ್ಡಿನಂಡ್ ಮಾರ್ಕೋಸ್ ವಿರುದ್ಧ ಪ್ರತಿಭಟನೆ ಮೆರವಣಿಗೆ ಆಯೋಜಿಸಿದರು. ಈ ಅಹಿಂಸಾತ್ಮಕ ಬಂಡಾಯದಿಂದ ತನ್ನ ಪ್ರಭಾವ ಕಡಿಮೆಯಾಗುತ್ತಿರುವುದು ತಿಳಿದ ಕೂಡಲೇ ಮಾರ್ಕೋಸ್ ದೇಶವನ್ನೇ ಬಿಟ್ಟು ಹೋದರು'

- 1988ರಲ್ಲಿ, ಚಿಲಿಯನ್ನರು ಕ್ರೂರ ಸರ್ವಾಧಿಕಾರಿ ಅಗುಸ್ಟೋ ಪಿನೊಷೆಟ್ ಹೇರಿದ್ದ ಭಯವನ್ನು ಮೀರಿ ಪ್ರಚಾರಾಭಿಯಾನ ಮಾಡಿದರು ಮತ್ತು ಅವರ ವಿರುದ್ಧ ಪ್ರತಿಭಟನೆ ನಡೆಸಿದರು. ಈ ಕ್ರಮಗಳು ಪಿನೊಷೆಟ್‌ನ ಬೆಂಬಲವನ್ನು ಕಡಿಮೆಗಿಳಿಸಿದ ಕಾರಣ, ಆತನ ಬೆಂಬಲಿಗನಾದ ಸೇನಾ ಮುಖ್ಯಸ್ಥ ಸದಸ್ಯರೇ ಬಿಕ್ಕಟ್ಟು ತಾರಕಕ್ಕೇರಿದ ಸಂದರ್ಭದಲ್ಲಿ ಆತನಿಗೆ ಪ್ರಾಮಾಣಿಕ ಬೆಂಬಲ ನೀಡಲಿಲ್ಲ ಮತ್ತು ಆತ ಅಧಿಕಾರದಿಂದ ಕೆಳಗಿಳಿಯಬೇಕಾಯಿತು;

- 1980–1989 ನಡುವೆ ಪೋಲಂಡ್ ಐಕ್ಯಮತ ಚಳವಳಿಯ ಭಾಗವಾಗಿ ಜನರು ಸ್ವತಂತ್ರ ವ್ಯಾಪಾರ ಸಂಘಟನೆಯನ್ನು ಆಯೋಜಿಸಿದರು ಮತ್ತು ತಮ್ಮ ದೇಶವನ್ನು ಸೋವಿಯತ್ ಆಳ್ವಿಕೆಯಿಂದ ವಾಪಾಸು ಪಡೆದುಕೊಂಡರು;

- 1989ರಲ್ಲಿ ವೆಲ್ವೆಟ್ ಕ್ರಾಂತಿ ಎಂದೇ ಪ್ರಚಾರ ಪಡೆದುಕೊಂಡ ಪ್ರತಿಭಟನೆಗಳು ಮತ್ತು ಮುಷ್ಕರಗಳು ಜಕೊಸ್ಲೊವಾಕಿಯಾದಲ್ಲಿ ಕಮ್ಯುನಿಸಂನಿಂದ ಅಧಿಕಾರದ ಶಾಂತಿಯುತ ಹಸ್ತಾಂತರವಾಗುವಂತೆ

ಮಾಡಿದವರು. ಅಂತಹುದೇ ಕ್ರಮಗಳು ಪೂರ್ವ ಜರ್ಮನಿ, ಮತ್ತು ಲಾಟ್ವಿಯ, ಲಿಥುವಾನಿಯ ಮತ್ತು ಈಸ್ಟೋನಿಯದಲ್ಲಿ 1991ರಲ್ಲಿ ಶಾಂತಿಯುತ ಅಧಿಕಾರ ಹಸ್ತಾಂತರವನ್ನು ಕಂಡಿವೆ;

- ಮುಷ್ಕರಗಳು, ಬಹಿಷ್ಕಾರಗಳು, ನಾಗರಿಕ ಅಸಹಕಾರ ಮತ್ತು ಹೊರಗಿನ ನಿಷೇಧಗಳು 1980ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವರ್ಣ ವಿಭೇಧ ನೀತಿಯನ್ನು 1990ರಲ್ಲಿ ತೊರೆಯುವಂತೆ ಮಾಡಲು ಪ್ರಮುಖ ಪಾತ್ರ ವಹಿಸಿವೆ;
- ನಂತರದ ದಶಕದಲ್ಲಿ, ಸರ್ಬ್‌ಗಳು (2000), ಜಾರ್ಜಿಯನ್‌ಗಳು (2003), ಮತ್ತು ಉಕ್ರೇನಿಯನ್ನರು (2004) ಸದ ಚುನಾವಣಾ ಫಲಿತಾಂಶವನ್ನು ತಡೆಯಲು ಅಥವಾ ಪ್ರತಿರೋಧಿಸುವ ಮೂಲಕ ನಿರಂಕುಶಾಧಿಕಾರಿ ನಿಯಂಗಳನು ಅಂತ್ಯಗೊಳಿಸಿದರು;
- 2005ರಲ್ಲಿ, ಲೆಬನೀಸ್‌ಗಳು ಸಿರಿಯಾದ ಸೈನಿಕರು ವಶಪಡಿಸಿಕೊಂಡಿದ್ದ ತಮ್ಮ ಭೂಮಿಯನ್ನು ವ್ಯಾಪಕ ಅಹಿಂಸಾತ್ಮಕ ಪ್ರತಿಭಟನೆಗಳ ಮೂಲಕವೇ ಮರುಪಡೆದುಕೊಂಡರು.
- 2006ರಲ್ಲಿ, ನೇಪಾಳಿಗಳು ಸಾಮೂಹಿಕ ಅಸಹಕಾರದ ಮೂಲಕ ನಾಗರಿಕ ಆಡಳಿತವನ್ನು ಮರು ಆರಂಭಿಸುವಂತೆ ಒತ್ತಡ ತಂದರು;
- 2007-2009ರ ನಡುವೆ ಹಿಂಸಾತ್ಮಕ ಉಗ್ರವಾದದ ನಡುವೆಯೇ ಮತ್ತು ಸೇನಾ ಆಡಳಿತದ ಮುಖದಲ್ಲಿ, ಪಾಕಿಸ್ತಾನಿ ವಕೀಲರು, ನಾಗರಿಕ ಸಮಾಜದ ಸಂಘಟನೆಗಳು ಮತ್ತು ಸಾಮಾನ್ಯ ಜನರು ಯಶಸ್ವಿಯಾಗಿ ಸ್ವತಂತ್ರ ನ್ಯಾಯವ್ಯವಸ್ಥೆಗಾಗಿ ಒತ್ತಡ ತಂದರು ಮತ್ತು ತುರ್ತು ಕಾನೂನುಗಳನ್ನು ರದ್ದುಗೊಳಿಸಿದರು.

## ಜನರು ಒಪ್ಪದೆ ಇದ್ದಲ್ಲಿ, ನಾಯಕರು ಆಡಳಿತ ನಡೆಸಲು ಸಾಧ್ಯವೇ ಇಲ್ಲ

ಇವುಗಳು ಮತ್ತು ನಾಗರಿಕ ಪ್ರತಿರೋಧಕ್ಕೆ ಸಂಬಂಧಿಸಿದ ಇತರ ಚಳವಳಿಗಳು ಯಶಸ್ವಿಯಾಗಲು ಕಾರಣ ಅವುಗಳು ಮೂಲಭೂತವಾಗಿ ಶಕ್ತಿಯ ಅಂತರಾತ್ಮವನ್ನು ಹೊಂದಿದ್ದವು; ಅಂದರೆ ಒಂದು ಸಮಾಜದಲ್ಲಿ ಸರಿಸುಮಾರು ಎಲ್ಲಾ ಸಂಸ್ಥೆಗಳು, ಸಂಘಟನೆಗಳು ಮತ್ತು ವ್ಯವಸ್ಥೆಗಳು ಆ ಕಾಲಕ್ಕೆ ಚಾಲ್ತಿಯಲ್ಲಿರುವ ಒಪ್ಪಿಗೆ, ಸಹಕಾರ, ಮತ್ತು ಅತ್ಯಧಿಕ ಸಂಖ್ಯೆಯಲ್ಲಿರುವ ಜನಸಾಮಾನ್ಯರ ಸಮ್ಮತಿಯನ್ನು ಅವಲಂಭಿಸಿದೆ. ಹೀಗಾಗಿ ಜನರು ತಮ್ಮ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳಲು ಬಯಸಿದಲ್ಲಿ ಮತ್ತು ಸಹಕಾರವನ್ನು ಒಂದು ವ್ಯವಸ್ಥಿತ ಮತ್ತು ಕಾರ್ಯತಂತ್ರಗಳ ರೂಪದಲ್ಲಿ ಹಿಂತೆಗೆದುಕೊಂಡಲ್ಲಿ, ಅವರು ಒಂದು ಶಕ್ತಿಯಾಗಿ ಪರಿವರ್ತನೆಯಾಗಬಲ್ಲರು. ಜನರು ಒಪ್ಪಿಕೊಳ್ಳದೆ ಇರುವಾಗ, ಅಧ್ಯಕ್ಷರು, ಮೇಯರ್‌ಗಳು, ಸಿಇಒಗಳು, ಜನರಲ್‌ಗಳು ಮತ್ತು ಇತರ ಶಕ್ತಿ ಕೇಂದ್ರಗಳು ಅಂಕೆಯಿಲ್ಲದ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ.

ಅಹಿಂಸಾತ್ಮಕ ತಂತ್ರಗಳು, ಅಂದರೆ ಮುಷ್ಕರಗಳು, ಬಹಿಷ್ಕಾರಗಳು, ಸಾಮೂಹಿಕ ಪ್ರತಿಭಟನೆಗಳು, ಸಾಮಾಜಿಕ ಅಸಹಕಾರಗಳು ಪರ್ಯಾಯ ಸಂಘಟನೆಗಳ ಸ್ಥಾಪನೆ ಮತ್ತು ಅಕ್ಷರಶಃ ನೂರಾರು ಇತರ ಸೃಜನಶೀಲ ಕಾರ್ಯಗಳಲ್ಲಿ

ಈ ಸಾಧನಗಳ ಬಳಕೆಯಾಗುತ್ತದೆ. ಅವುಗಳನ್ನು ನೈತಿಕ ಕಾರಣಗಳಿಗೆ ಬಳಸಬೇಕೆಂದಿಲ್ಲ. ಬದಲಾಗಿ ಪ್ರಾಯೋಗಿಕವಾದವುಗಳು. ಕೆಲವು ನಾಗರಿಕ ಪ್ರತಿರೋಧದ ಹಾದಿಯನ್ನು ತುಳಿದವರು ಇತರ ದೇಶಗಳಲ್ಲಿ ಅಂತಹ ದಾರಿ ಯಶಸ್ವಿಯಾಗಿರುವುದನ್ನು ನೋಡಿದ್ದರು ಮತ್ತು ಇಂತಹ ಪ್ರತಿಯೋಧವು ಯಶಸ್ಸು ಪಡೆಯಲು ತಮಗೆ ಲಭ್ಯವಿರುವ ಸೂಕ್ತ ದಾರಿ ಎಂದು ಗುರುತಿಸಿರುತ್ತಾರೆ.

## ಕೌಶಲ್ಯಗಳು ಮತ್ತು ಷರತ್ತುಗಳು

ಆದರೆ ಈ ಪ್ರೇರಣಾತ್ಮಕ ಅಹಿಂಸಾತ್ಮಕ ಚಳವಳಿ ಯಶಸ್ಸುಗಳ ನಡುವೆ, ಇತಿಹಾಸ ಮತ್ತು ಸಮಕಾಲೀನ ಜಗತ್ತು ವೈಫಲ್ಯ ಅಥವಾ ಪೂರ್ಣಗೊಳ್ಳದ ಚಳವಳಿಗಳ ಉದಾಹರಣೆಗಳನ್ನೂ ಮುಂದಿಡುತ್ತದೆ. ಪೋಲಂಡ್ ಮತ್ತು ಝೆಕೋಸ್ಲಾವೇಕಿಯಗಳು ಅಹಿಂಸಾತ್ಮಕ ಕ್ರಾಂತಿಗಳನ್ನು ಮಾಡಿದ ವರ್ಷವೇ ಟಿಯಾನನ್ಮೆನ್ ಸ್ಕ್ವೇರ್ ಮಾರಣಹೋಮವನ್ನೂ ಕಂಡಿವೆ. ಕಳೆದ ದಶಕದಲ್ಲಿ ದೊಡ್ಡ ಪ್ರಮಾಣದಲ್ಲಿ ಜನರು ಅಹಿಂಸಾತ್ಮಕ ತಂತ್ರಗಳನ್ನು ಬರ್ಮಾ, ಜಿಂಬಾಬ್ವೆ, ಈಜಿಪ್ಟ್ ಮತ್ತು ಇರಾನ್‌ನಲ್ಲಿ ಬಳಸಿದ್ದಾರೆ. ಆದರೆ ಚಳವಳಿಗಳ ಗುರಿ ತಲುಪಲು ಈವರೆಗೆ ಸಾಧ್ಯವಾಗಿಲ್ಲ. ಪೂರ್ವ ತೈಮರ್‌ನಲ್ಲಿ ಯಶಸ್ವೀ ಸ್ವಯಂನಿರ್ಧಾರದ ಹೋರಾಟವು ಯಶಸ್ವಿಯಾಗಿದೆ. ಅಲ್ಲಿ ನಾಗರಿಕ ಪ್ರತಿರೋಧ ಅಸಾಧರಣವಾಗಿತ್ತು. ಆದರೆ ಅದು ನಾಗರಿಕರನ್ನು ಆಧರಿಸಿದ ಚಳವಳಿಗಳನ್ನು ಆಕ್ರಮಣಕಾರರ ಮೇಲೆ ರೂಪಿಸಲು ನೆರವಾದರೆ, ಪ್ಯಾಲೆಸ್ತೀನ್, ಪಶ್ಚಿಮ ಪಪುವಾ, ಪಶ್ಚಿಮ ಸಹಾರಾ ಮತ್ತು ಟಿಬೆಟ್‌ಗಳಲ್ಲಿ ಆ ಹೋರಾಟಗಳು ಇನ್ನೂ ಪರಿಹಾರ ಕಂಡಿಲ್ಲ.

ಇವುಗಳು ಮತ್ತು ಇತರ ಪ್ರಕರಣಗಳಲ್ಲಿ ವ್ಯತ್ಯಾಸಗಳು ಏನು?

ಇವುಗಳು ಮತ್ತು ಇತರ ಚಳವಳಿಗಳು ಯಶಸ್ವಿಯಾಗಲು ಅಥವಾ ವಿಫಲವಾಗಲು ಕಾರಣವಾದ ಅಂಶಗಳನ್ನು ಸಕಾರಣ ಮತ್ತು ಉತ್ತಮ ಮಾಹಿತಿಯುಳ್ಳ ಜನರು ಒಪ್ಪಲಾರರು. [1] ಪ್ರತೀ ಪರಿಸ್ಥಿತಿಯೂ ಅತೀ ಸಂಕೀರ್ಣವಾಗಿತ್ತು ಮತ್ತು ನೇರ ಮರಣವು ಅತಿ ಕಷ್ಟವಾಗಿತ್ತು. ವಿದ್ವಾಂಸರು, ಪತ್ರಕರ್ತರು ಮತ್ತು ಇತರರಿಂದ ಹೆಚ್ಚಾಗಿ ಕೇಳಿಬರುವ ವಾದಗಳೆಂದರೆ, ಪಥಗಳು ಮತ್ತು ಇವುಗಳ ಫಲಿತಾಂಶವು ಮತ್ತು ಇತರ ಅತೀ ಮುಖ್ಯವಾದ ಅಹಿಂಸಾತ್ಮಕ ಚಳವಳಿಗಳು ಸಾಮಾನ್ಯವಾಗಿ ಕಾರ್ಯನಿರ್ವಹಣೆ ಮಾಡಿರುವ ವ್ಯಾಪಕ ರಚನೆಗಳು, ಷರತ್ತುಗಳು ಮತ್ತು ಅತಿ ವಿಶಿಷ್ಟ ಪರಿಸ್ಥಿತಿಗಳಲ್ಲಿ ಆಗಿವೆ.

ಉದಾಹರಣೆಗೆ, ಅಹಿಂಸಾತ್ಮಕ ಚಳವಳಿಗಳು ವಿರೋಧಿಗಳು ಮಾರಕ ಪಡೆಗಳನ್ನು ಬಳಸಲು ಇಚ್ಛಿಸದೆ ಇದ್ದಾಗ ಮಾತ್ರವೇ ಪರಿಣಾಮಕಾರಿಯಾಗುತ್ತವೆ ಎನ್ನುವ ವಾದಗಳು ಇವೆ. ನಿರ್ದಿಷ್ಟ ಆರ್ಥಿಕ ಅರ್ಹತೆ (ಅಂದರೆ ಆರ್ಥಿಕ ಆದರ್ಶ, ಆರ್ಥಿಕ ಮಟ್ಟಗಳು, ಆಸ್ತಿ ಹಂಚಿಕೆ ಮಧ್ಯಮ ವರ್ಗದ ಅಸ್ತಿತ್ವ) ಮತ್ತು ಶೈಕ್ಷಣಿಕ ಮಟ್ಟವೂ ಇಂತಹ ಚಳವಳಿಗಳ ಯಶಸ್ಸಿಗೆ ನಿರ್ಣಾಯಕ ಎಂದೂ ಕೆಲವರು ವಾದಿಸುತ್ತಾರೆ. ಇನ್ನೂ ಕೆಲವರು, ಸೂಪರ್ ಪವರ್‌ಗಳು ಮತ್ತು ಪ್ರಾಂತೀಯ ಅಧಿನಾಯಕರು ಮುಂಚೂಣಿಯಲ್ಲಿರುವುದು ಮತ್ತು ಇತರ ವಿಚಾರಗಳು ಫಲಿತಾಂಶವನ್ನು ನಿರ್ಧರಿಸುತ್ತವೆ ಎಂದು ವಾದಿಸುತ್ತಾರೆ. ಹೆಚ್ಚುವರಿ ರಚನೆಗಳು ಮತ್ತು ಷರತ್ತುಗಳನ್ನೂ ಇಲ್ಲಿ ಉದಾಹರಿಸಬಹುದು- ಅಂದರೆ

ಜನಾಂಗೀಯ ವೈವಿಧ್ಯತೆ, ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ, ಜನಸಂಖ್ಯೆಯ ಗಾತ್ರ, ಭೂಮಿಯ ವಲಯ ಮತ್ತು ಇನ್ನೂ ಅನೇಕ. ಇವುಗಳಲ್ಲಿ ಬಹುತೇಕ ಸ್ಥಿತಿಗಳು ಒಂದು ಚಳವಳಿಯ ಮೇಲೆ ಪರಿಣಾಮ ಬೀರಲಿವೆ.

ರಚನಾತ್ಮಕ ಮತ್ತು ಸ್ಥಿತಿಯಾದರಿತ ಅಂಶಗಳಿಗೆ ವಿರುದ್ಧ ಅಂಶಗಳಾಗಿ, ಸಂಘರ್ಷವನ್ನು ಮುಂದಿಡುವಾಗಿನ ಚಳವಳಿಯ ಕೌಶಲ್ಯಗಳನ್ನು ಆಧರಿಸಿದ ಅಂಶಗಳನ್ನು ಇಡಬಹುದು. ಅಂದರೆ ಶೈಕ್ಷಣಿಕವಾಗಿ ನಾವು ಮಧ್ಯವರ್ತಿಗಳು ಎಂದು ಯಾವುದನ್ನು ಕರೆಯುತ್ತೇವೆಯೋ ಅದು. ಕೌಶಲ್ಯಗಳು ಮತ್ತು ಮಧ್ಯವರ್ತಿಗಳು ಚಳವಳಿಯ ಮೇಲೆ ನಿಯಂತ್ರಣ ಹೊಂದಿರುವ ವಿಷಯಗಳ ಬಗ್ಗೆ ಉಲ್ಲೇಖಿಸುತ್ತದೆ: ಚಳವಳಿಯು ಯಾವ ಕಾರ್ಯತಂತ್ರ ಯೋಜನೆಯನ್ನು ಆರಿಸಿಕೊಳ್ಳುತ್ತದೆ; ಜನರನ್ನು ಸೇರಿಸಲು ಮತ್ತು ಅವರನ್ನು ಒಳಗೊಳ್ಳುವಂತೆ ಮಾಡಲು ಯಾವ ಭಾಷೆಯನ್ನು ಅದು ಬಳಸುತ್ತದೆ; ಅವರು ಸಂಘಟನೆಗಳನ್ನು ಹೇಗೆ ಕಟ್ಟುತ್ತಾರೆ; ವಿರೋಧಿಗಳನ್ನು ಎಲ್ಲಿ ಮತ್ತು ಹೇಗೆ ಗುರಿ ಮಾಡಲಿದ್ದಾರೆ' ಮತ್ತು ಇತರ ಕೆಲವು ಅಸಂಖ್ಯಾತ ನಿರ್ಧಾರಗಳು ನಾಗರಿಕ ಪ್ರತಿರೋಧವನ್ನು ಸಂಯೋಜಿಸುವುದರಲ್ಲಿ ಒಳಗೊಂಡಿರುತ್ತದೆ.

ನನ್ನ ದೃಷ್ಟಿಕೋನದಲ್ಲಿ ಈ ಕೌಶಲ್ಯ ಆಧರಿತ ಅಂಶಗಳು ಸಾಮಾನ್ಯವಾಗಿ ಮುಖ್ಯವಾಗಿ, ಅಹಿಂಸಾತ್ಮಕ ಚಳವಳಿಯನ್ನು ವಿಶ್ಲೇಷಿಸುವವರು ಅಥವಾ ಅದರ ಜೊತೆಗೆ ಸಂಪರ್ಕ ಹೊಂದಿದವರಿಂದ ಕಡಿಮೆ ಒತ್ತು ನೀಡಲಾಗಿರುತ್ತದೆ ಅಥವಾ ಅಲಕ್ಷಿಸಿರಲಾಗಿರುತ್ತದೆ. ಹೀಗೆ ಆಗಲು ಕಾರಣವೇನು ಎನ್ನುವುದು ಈ ಲೇಖನದ ಮಿತಿಯನ್ನು ಮೀರಿರುತ್ತದೆ. ಆದರೆ ಒಂದು ಕಾರಣವೆಂದರೆ ಇದು ಯಾವ ಅಹಿಂಸಾತ್ಮಕ ಹೋರಾಟವನ್ನು ಆಧರಿಸಿದೆ ಎನ್ನುವ ಆವರಣವನ್ನು ತಿಳಿದುಕೊಂಡಿರುವುದಿಲ್ಲ ಅಥವಾ ಸಂಶಯದಲ್ಲಿರುತ್ತಾರೆ. ಅದು ಸಾಂಘಿಕ ನಡವಳಿಕೆಗಳಲ್ಲಿನ ಪರಿವರ್ತನೆಗಳು, ನಿಯಂತ್ರಣ ಹೇರ ಬಯಸುವ ಮತ್ತು ದೌರ್ಜನ್ಯಕ್ಕೆ ಒಳಪಡಿಸುವ ವಿರೋಧಿ ವ್ಯಕ್ತಿಗಳಿಂದ ಶಕ್ತಿಯನ್ನು ಜನರ ಚಳವಳಿಗಳಿಗೆ ಮರುಪಡೆದುಕೊಳ್ಳಬಹುದು. ಬದಲಾಗಿ, ಪ್ರಕರಣಗಳು ನಡೆದ ರೀತಿಯಲ್ಲಿ, ಅದನ್ನು ಸಾಧಿಸಿರುವ ಬಗೆಯಲ್ಲಿ ಅವರು ಬಹಿಷ್ಕೃತ ಅಂಶಗಳು ಅಥವಾ ವಿಶೇಷವಾದ ಪರಿಸ್ಥಿತಿಗಳು ಕೆಲಸ ಮಾಡಿರುತ್ತವೆ ಎನ್ನುವ ಅಂದಾಜು ಮಾಡಿರುತ್ತಾರೆ.

ಆದರೆ, ಅಹಿಂಸಾತ್ಮಕ ಚಳವಳಿಗಳ ಹಾದಿಗಳು ಮತ್ತು ಫಲಿತಾಂಶಗಳಲ್ಲಿ ರಚನಾತ್ಮಕ ಪಾತ್ರಗಳು ಮತ್ತು ಪ್ರೇರಣೆ ನೀಡುವ ಸ್ಥಿತಿಗಳನ್ನು ಗೌರವಿಸಬಹುದು. ಆದರೆ ಮಧ್ಯವರ್ತಿ ಮತ್ತು ಕೌಶಲ್ಯಗಳ ಪ್ರಾಮುಖ್ಯತೆಯನ್ನು ಅಲಕ್ಷಿಸಬಾರದು. ಅಲ್ಲದೆ, ಮಧ್ಯವರ್ತಿ ಮತ್ತು ಕೌಶಲ್ಯಗಳು ವ್ಯತ್ಯಾಸವನ್ನು ತರಬಲ್ಲವು ಮತ್ತು ಕೆಲವು ಪ್ರಕರಣಗಳಲ್ಲಿ ಚಳವಳಿಗಳು ವ್ಯತಿರಿಕ್ತ ಪರಿಸ್ಥಿತಿಯ ಮಿತಿಯನ್ನು ಮೀರುವುದು, ತಪ್ಪಿಸಿಕೊಳ್ಳುವುದು ಮತ್ತು ಬದಲಿಸಲೂ ಸಾಧ್ಯವಾಗಿಸಿದೆ.

ಇತರ ಉದ್ಯಮ ಮತ್ತು ಸೇನಾ ಚಿಂತನೆಗಳಲ್ಲಿ ಕೌಶಲ್ಯಗಳು ಮತ್ತು ಮಧ್ಯವರ್ತಿಗಳನ್ನು ಕೆಲವೊಮ್ಮೆ ಪ್ರಾಮುಖ್ಯತೆ ನೀಡಿ ಮತ್ತು ಸಾಮಾನ್ಯ ಜ್ಞಾನವೆಂದೂ ಪರಿಗಣಿಸಲಾಗುತ್ತದೆ. ಈ ನಿಟ್ಟಿನಲ್ಲಿ ಅಹಿಂಸಾತ್ಮಕ ಚಳವಳಿ ಏಕೆ ಭಿನ್ನವಾಗಿರುತ್ತದೆ? ಒಬ್ಬ ಸೇನಾ ಮುಖ್ಯಸ್ಥ ಅಥವಾ ಕಾರ್ಪೊರೇಟ್ ಸಿಇಒ ಬಳಿ ಅವರ ಕಾರ್ಯಯೋಜನೆಯ ಫಲಿತಾಂಶಕ್ಕೆ ಕಾರ್ಯತಂತ್ರಗಳನ್ನು ರೂಪಿಸುವುದು ಅಗತ್ಯವಿಲ್ಲ ಎಂದು ಹೇಳಿದಲ್ಲಿ ಜೋರಾಗಿ ನಗಬಹುದು. ಸ್ಪರ್ಧೆಗಳು ಮತ್ತು ಸಂಘರ್ಷಾತ್ಮಕ ಸಂಪರ್ಕಗಳು ಸಾಮಾನ್ಯ ಸ್ಥಿತಿಗಳನ್ನು ಆಧರಿಸಿ ಪೂರ್ವ ನಿರ್ಧರಿತವಾಗಿರುತ್ತವೆ

ಎಂದು ಜನರು ಆಲೋಚಿಸಿದ್ದಲ್ಲಿ, ಸನ್ ಟ್ಜು ಅವರ ಕ್ಲಾಸಿಕ್ ಪುಸ್ತಕವಾಗಿರುವ ದ ಆರ್ಟ್ ಆಫ್ ವಾರ್ ಸುಮ್ಮನೆ ಅಷ್ಟೊಂದು ಜನಪ್ರಿಯವಾಗಿಲ್ಲ.

ಹಾಗಿದ್ದರೆ ಈ ಲೇಖನದ ಪ್ರಮುಖ ಪ್ರಶ್ನೆಯತ್ತ ಮತ್ತೆ ಗಮನಹರಿಸೋಣ- ಅಹಿಂಸಾತ್ಮಕ ಚಳವಳಿಯನ್ನು ಪರಿಣಾಮಕಾರಿಯಾಗಿಸುವುದೇನು?- ಐತಿಹಾಸಿಕ ಚಳವಳಿಗಳಿಂದ ಪಡೆದುಕೊಂಡ ರಚನಾತ್ಮಕ ಆಯ್ಕೆಗಳು ಮತ್ತು ಅತ್ಯುತ್ತಮ ಅಭ್ಯಾಸಗಳತ್ತ ಗಮನಿಸುವ ಮೂಲಕ ನಾವು ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬಹುದು. ವೈವಿಧ್ಯಮಯವಾದ ಸಾಂಸ್ಥಿಕ ಆಧರಿತ ಅಂಶಗಳು ಮತ್ತು ಕೌಶಲ್ಯಗಳು ಒಂದು ಚಳವಳಿಯ ಫಲಿತಾಂಶದ ಮೇಲೆ ಪ್ರಭಾವ ಬೀರಬಲ್ಲದು. ಆದರೆ (ಸರಳತೆಯ ಕಾರಣಕ್ಕಾಗಿ) ಅವುಗಳನ್ನು ನಾವು ಕೆಲವು ಪ್ರಮುಖವಾದವುಗಳಿಗೆ ಭಟ್ಟಿ ಇಳಿಸಿದಲ್ಲಿ, ಯಶಸ್ವೀ ಅಹಿಂಸಾತ್ಮಕ ಚಳವಳಿಗಳ ಮೂರು ಅಂಶಗಳು ಮುಖ್ಯವಾಗಿ ಕಾಣಿಸುತ್ತವೆ: ಏಕತೆ, ಯೋಜನೆ ಮತ್ತು ಅಹಿಂಸಾತ್ಮಕ ಶಿಸ್ತು.

## ಏಕತೆ, ಯೋಜನೆ ಮತ್ತು ಶಿಸ್ತು

ಮೊದಲ ಬಾರಿ ಗಮನಿಸಿದಾಗ ಅಂತಹ ಅಂಶಗಳ ಪ್ರಾಮುಖ್ಯತೆ ಸ್ಪಷ್ಟವಾಗಿ ಕಾಣಲಿದೆ. ಹಾಗಿದ್ದರೂ ಈ ಅಂಶಗಳ ಗಾಂಭೀರ್ಯತೆ ಮತ್ತು ಅವುಗಳು ಅತಿಕ್ರಮಣಾತ್ಮಕ ಫಲಿತಾಂಶಗಳು ಕೆಲವೊಮ್ಮೆ ಕಳೆದು ಹೋಗಬಹುದು. ಒಬ್ಬರು ಚಳವಳಿಗಳನ್ನು ಪ್ರಮುಖವಾಗಿ ಯುದ್ಧ ತಂತ್ರದಲ್ಲಿ ಮತ್ತು ಮೂಲಮಟ್ಟದಲ್ಲಿ ನೋಡಿದಾಗ ಹೀಗಾಗಬಹುದು. ಪ್ರತಿಯೊಂದಕ್ಕೂ ತನ್ನದೇ ಆದ ವಿವರಣೆಯಿದೆ.

ಏಕತೆ ಅತೀ ಅಗತ್ಯವಾಗಿರುತ್ತದೆ. ಏಕೆಂದರೆ ಅಹಿಂಸಾತ್ಮಕ ಚಳವಳಿಗಳು ತಮ್ಮ ಪ್ರಾಬಲ್ಯವನ್ನು ಸಮಾಜದ ವೈವಿಧ್ಯಮಯ ಕ್ಷೇತ್ರಗಳಲ್ಲಿ ಜನರ ಭಾಗವಹಿಸುವಿಕೆಯಲ್ಲಿ ಪಡೆದುಕೊಳ್ಳುತ್ತವೆ. ಹೆಚ್ಚು ಜನರ ಚಳವಳಿಗಳು ಅದನ್ನು ಬೆಂಬಲಿಸುತ್ತಿದ್ದಂತೆಯೇ, ಅದರ ನ್ಯಾಯಸಮ್ಮತೆ, ಶಕ್ತಿ ಮತ್ತು ಯುದ್ಧತಂತ್ರದ ಸಂಗ್ರಹ ಹೆಚ್ಚಾಗುತ್ತದೆ. ಯಶಸ್ವೀ ಚಳವಳಿಗಳು ಅದೇ ಕಾರಣದಿಂದ ನಿರಂತರವಾಗಿ ತಮ್ಮ ಸಮಾಜದ ಹೊಸ ಗುಂಪುಗಳನ್ನು ತಲುಪುತ್ತವೆ. ಉದಾಹರಣೆಗೆ, ಪುರುಷರು ಮತ್ತು ಮಹಿಳೆಯರು; ಯುವಕರು, ಹಿರಿಯರು ಮತ್ತು ವಯಸ್ಕರು, ಗ್ರಾಮೀಣ ಮತ್ತು ನಗರ ಜನಸಂಖ್ಯೆ; ಅಲ್ಪಸಂಖ್ಯಾತರು; ಧಾರ್ಮಿಕ ಸಂಸ್ಥೆಗಳ ಸದಸ್ಯರು, ರೈತರು, ಕಾರ್ಮಿಕರು, ಉದ್ಯಮ ಜನರು ಮತ್ತು ವೃತ್ತಿಪರರು; ಶ್ರೀಮಂತರು, ಮಧ್ಯಮವರ್ಗ ಮತ್ತು ಕೆಳ ಆರ್ಥಿಕ ವರ್ಗವರು; ಪೊಲೀಸರು, ಸೈನಿಕರು ಮತ್ತು ನ್ಯಾಯಾಂಗದ ಸದಸ್ಯರು; ಹಾಗೆಯೇ ಇತರ ಗುಂಪುಗಳೂ ಸೇರಿವೆ.

ಯಶಸ್ವೀ ಚಳವಳಿಗಳು ನಿರಂತರವಾಗಿ ತಮ್ಮ ಶತ್ರುಗಳ ಬೆಂಬಲಿಗರನ್ನು ತಲುಪುತ್ತವೆ; ಸುಸ್ಥಿರ ನಾಗರಿಕ ಪ್ರತಿರೋಧದ ಒಂದು ಗಟ್ಟಿಯಾದ ವಿಷಯವೆಂದರೆ, ಏಕರೂಪದ ದೃಷ್ಟಿಕೋನದಲ್ಲಿ ಪ್ರಾಮಾಣಿಕತೆಯ ಸ್ಥಾನಾಂತರವಾಗುವುದು ಮತ್ತು ಅದರ ವಿರೋಧಿಗಳ ಶ್ರೇಣಿಯಲ್ಲಿ ಓರೆಕೋರೆಯಾಗುವ ಸಾಧ್ಯತೆಯು ಇರುವುದು. ಉದಾಹರಣೆಗೆ, ದಕ್ಷಿಣ ಆಫ್ರಿಕಾದ ವರ್ಣಭೇಧ ವಿರೋಧಿ ಚಳವಳಿಗಳು, ಚಾಲ್ತಿಯಲ್ಲಿದ್ದ ನಾಗರಿಕ ಗೊಂದಲದ ಜೊತೆಗೂಡಿ, ರಾಷ್ಟ್ರೀಯ ಸಮನ್ವಯಕ್ಕೆ ಕರೆನೀಡಿತ್ತು. ಹೀಗಾಗಿ ವ್ಯಾಪಕ ಬೆಂಬಲ ಮತ್ತು ಬದಲಾವಣೆಯ ಉದ್ದೇಶಕ್ಕೆ

ಏಕತೆಯನ್ನು ಮೂಡಿಸಿತ್ತು. ಈ ಹಿಂದೆ ರಾಷ್ಟ್ರದಲ್ಲಿ ವರ್ಣಭೇಧವನ್ನು ಬೆಂಬಲಿಸಿದ್ದ ಬಿಳಿಯರು ಕೂಡ ಈ ಬದಲಾವಣೆಗೆ ಬೆಂಬಲಿಸಿದರು.

ಅಹಿಂಸಾತ್ಮಕ ಚಳವಳಿಗಳಲ್ಲಿ ಭಾಗವಹಿಸುವವರು ತಮ್ಮ ಚಳವಳಿಯು ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಬಗ್ಗೆ ಸಂಕೀರ್ಣ ನಿರ್ಧಾರಗಳನ್ನು ಮಾಡಬೇಕಾಗುತ್ತದೆ. ರಚನಾತ್ಮಕ ಕಾರ್ಯಯೋಜನೆಯು ಇದನ್ನು ಮಾಡುವಲ್ಲಿ ಪ್ರಮುಖವಾಗಿ ಅಗತ್ಯವಿರುತ್ತದೆ. ಒಬ್ಬರ ಉದ್ದೇಶದ ಗುಣಮಟ್ಟ ಹೇಗೇ ಇದ್ದರೂ ಸಹ, ಅಥವಾ ನೈತಿಕವಾಗಿ ವಿರೋಧಿಗಳ ಅನಿರ್ದಿಷ್ಟ ಕೃತ್ಯಗಳ ಹೊರತಾಗಿಯೂ, ಯೋಜನೆಗಳನ್ನು ಅತ್ಯುತ್ತಮವಾಗಿ ಕಾರ್ಯರೂಪಕ್ಕೆ ತಂದರೂ ಕೂಡ ದೌರ್ಜನ್ಯವು ಸಾಮಾನ್ಯವಾಗಿ ಪ್ರತಿರೋಧದ ತಕ್ಷಣದ ಅಥವಾ ಸುಧಾರಿತ ಕೃತ್ಯಗಳಿಂದ ಮಾತ್ರವೇ ತನ್ನ ಗುರಿ ಸಾಧಿಸಲಾರದು. ಬದಲಾಗಿ, ಚಳವಳಿಗಳು ಹೇಗೆ ನಾಗರಿಕ ಪ್ರತಿರೋಧಗಳನ್ನು ವ್ಯವಸ್ಥಿತವಾಗಿ ಆಯೋಜಿಸಬಹುದು ಮತ್ತು ಸಮಾಜದಲ್ಲಿ ಜನರು ಅದನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂದು ಅವರು ಯೋಜನೆ ರೂಪಿಸಿದಾಗ ಗುರಿಗಳನ್ನು ಸಾಧಿಸಬಹುದು ಮತ್ತು ಗುರಿ ಇಟ್ಟ ಮಹಾತ್ವಾಕಾಂಕ್ಷೆ ಈಡೇರಬಹುದು. ಯಾವ ಕಾರ್ಯ ಯೋಜನೆಗಳನ್ನು ಬಳಸಬೇಕು ಮತ್ತು ಅವುಗಳನ್ನು ಹೇಗೆ ಸರಣಿಯಲ್ಲಿ ಬಳಸಬೇಕು ಎಂದು ನಿರ್ಧರಿಸುವುದು; ಚಳವಳಿ ಯಾವ ಜನರ ಆಶೋತ್ತರಗಳು ಮತ್ತು ಕುಂದುಕೊರತೆಗಳನ್ನು ಪ್ರತಿನಿಧಿಸುತ್ತದೆಯೋ, ಅವರ ಅದನ್ನು ಆಧರಿಸಿ ಪ್ರಸ್ತಾಪಗಳನ್ನು ಮುಂದಿಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು; ಯಾವ ವ್ಯಕ್ತಿಗಳು ಮತ್ತು ಸಮೂಹಗಳನ್ನು ನಮ್ಮ ಕಾರ್ಯತಂತ್ರಗಳು ಗುರಿಯಾಗಿಸಬೇಕು ಎಂದು ಯೋಜಿಸುವುದು- ಯಾವ ಅಲ್ಪ, ಮಧ್ಯಮ ಮತ್ತು ಧೀರ್ಘಾವಧಿ ಉದ್ದೇಶಗಳನ್ನು ಹೊಂದಿರಬೇಕು; ಮತ್ತು ಸಂವಹನದ ಹಾದಿಯನ್ನು ಕಟ್ಟುವುದು. ಹಾಗೆ ಮಿತ್ರರ ಜೊತೆಗೆ ಒಡಂಬಡಿಕೆ ಏರ್ಪಡಿಸಬಹುದು ಮತ್ತು ಅಹಿಂಸಾತ್ಮಕ ಚಳವಳಿಗಳನ್ನು ಕಟ್ಟಬಹುದಾದ ಕೆಲವು ವಿಷಯಗಳನ್ನು ಚರ್ಚಿಸಿ ಸೃಜನಶೀಲವಾಗಿ ಕಾರ್ಯತಂತ್ರ ರೂಪಿಸಬೇಕು. ಹಾಗೆ ಮಾಡುವುದಕ್ಕೆ ಒಂದು ಅಹಿಂಸಾ ಚಳವಳಿಯು ರೂಪುಗೊಳ್ಳಬಹುದಾದ ಸನ್ನಿವೇಶದ ಪವಿತ್ರವಾದ ವಿಶ್ಲೇಷಣೆಯ ಅಗತ್ಯವಿದೆ. ಅವರ ಯೋಜನಾ ಪ್ರಕ್ರಿಯೆಯ ಭಾಗವಾಗಿ, ಪರಿಣಾಮಕಾರಿ ಚಳವಳಿಗಳನ್ನು ಅಧಿಕೃತವಾಗಿ ಅಥವಾ ಅನಧಿಕೃತವಾಗಿ ಮಾಹಿತಿ ಸಂಗ್ರಹಿಸುವುದು, ಮೂಲಮಟ್ಟದಲ್ಲಿ ಜನರ ಮಾತಿಗೆ ಕಿವಿಗೊಡುವುದು, ಮತ್ತು ಸ್ವತಃ ಅವರ ಸಲಹೆಕಾರರು ಮತ್ತು ಬದ್ಧತೆಯಿಲ್ಲದ ತೃತೀಪ ಪಕ್ಷಗಳು ನಿರಂತರವಾಗಿ ಸಂಘರ್ಷದ ಸಂದರ್ಭದಲ್ಲಿವಿಶ್ಲೇಷಿಸಿಕೊಳ್ಳುವುದು ನಡೆಯುತ್ತದೆ.

ಅಂತಿಮವಾಗಿ, ಒಂದು ಕಾರ್ಯಯೋಜನೆಯನ್ನು ಶಿಸ್ತಿನಿಂದ ಕಾರ್ಯರೂಪಕ್ಕೆ ತಂದಲ್ಲಿ ಮಾತ್ರವೇ ಪರಿಣಾಮಕಾರಿಯಾಗಿರುತ್ತದೆ. ಅತೀ ದೊಡ್ಡ ಅಪಾಯವೆಂದರೆ ಅಹಿಂಸಾ ಚಳವಳಿಯಲ್ಲಿ ಶಿಸ್ತನ್ನು ತರುವುದರಲ್ಲಿ ವಿಫಲವಾಗುವುದೇ ಆಗಿರುತ್ತದೆ. ಸದಸ್ಯರು ಹಿಂಸಾತ್ಮಕವಾಗಿ ಬದಲಾಗಬಹುದು. ಹೀಗಾಗಿ, ಅಹಿಂಸಾತ್ಮಕ ಶಿಸ್ತು- ಪ್ರಚೋದನೆಯ ಸಂದರ್ಭದಲ್ಲೂ ಅಹಿಂಸಾತ್ಮಕವಾಗಿ ಇರುವ ಜನರ ಸಾಮರ್ಥ್ಯ- ಸಾಮಾನ್ಯವಾಗಿ ಭಾಗವಹಿಸಿದವರಲ್ಲಿ ನಿರಂತರವಾಗಿ ತುಂಬಲಾಗಿದೆ. ಇದಕ್ಕಾಗಿ ವಾಸ್ತವಿಕ ಕಾರಣಗಳೂ ಇರುತ್ತವೆ. ಚಳವಳಿಯೊಂದರ ಸದಸ್ಯರ ಹಿಂಸಾ ಘಟನೆಗಳು ನಾಟಕೀಯವಾಗಿ ಅದರ ನ್ಯಾಯಬದ್ಧತೆಯನ್ನು ಕಡಿಮೆ ಮಾಡಲಿದೆ ಮತ್ತು ವಿರೋಧಿಗಳಿಗೆ ಹಿಂಜರಿತವನ್ನು ತಡೆದುಕೊಂಡು ಮೇಲೇಳಲು ಅವಕಾಶ ಕೊಡಲಿದೆ. ಮುಂದುವರಿದು, ಒಂದು ಚಳವಳಿ

ನಿರಂತರವಾಗಿ ಅಹಿಂಸಾತ್ಮಕವಾಗಿದ್ದಲ್ಲಿ, ತನ್ನ ಹೋರಾಟದ ಸಂದರ್ಭದಲ್ಲಿ, ವ್ಯಾಪಕವಾದ ಸಾಧ್ಯವಿರುವ ಮಿತ್ರರನ್ನು ತಲುಪುವಲ್ಲಿ ಹೆಚ್ಚು ಅವಕಾಶವನ್ನು ಪಡೆದಿರುತ್ತದೆ. ಅದರಲ್ಲಿ ವಿರೋಧಿಗಳ ಬೆಂಬಲಿಗರೂ ಸೇರಿರಬಹುದು..

ಈ ವಿಚಾರಗಳ ಬಗ್ಗೆ ಒಂದು ಪೂರ್ಣವಾದ ಅನ್ವೇಷಣೆಯು ಮತ್ತು ಅಹಿಂಸಾತ್ಮಕ ಪ್ರತಿರೋಧಗಳ ಮೆರಿಟ್‌ಗಳ ವಿಚಾರ ಮತ್ತು ಅದರ ನಿರಂತರವಾಗಿ ನಡೆದ ವ್ಯವಸ್ಥಿತ ಅಧ್ಯಯನಗಳು ಒಂದು ಪುಸ್ತಕವನ್ನೇ ತುಂಬಬಹುದು. ಪ್ರತೀ ಚಳವಳಿಯು ಈ ಬೆಳವಣಿಗೆಯ ಸಾಂಘಿಕವಾದ ಅರ್ಥೈಸುವಿಕೆಗೆ ಹೊಸತನ್ನು ಸೇರಿಸುತ್ತಾ ಹೋಗುತ್ತದೆ. ಹಾಗಿದ್ದರೂ ಈ ರೂಪದ ರಾಜಕೀಯ ಮತ್ತು ಸಾಮಾಜಿಕ ಕಾರ್ಯದಲ್ಲಿ ಸಾಕಷ್ಟು ಕಲೆ ಮತ್ತು ವಿಜ್ಞಾನಗಳತ್ತ ಗಮನಹರಿಸಬಹುದು. ಅವುಗಳ ಬಗ್ಗೆ ಹೆಚ್ಚು ಅಧ್ಯಯನ ಮತ್ತು ಅಭಿವೃದ್ಧಿಯಾಗಿಲ್ಲ.

ಆದರೆ, ಈ ಮೂರು ಅಂಶಗಳಾದ - ಏಕತೆ, ಯೋಜನೆ ಮತ್ತು ಶಿಸ್ತು- ಕಾಲವನ್ನು ಮೀರಿದೆ ಮತ್ತು ಒಂದು ಸಾಮಾನ್ಯ ರೂಪುರೇಷೆಯನ್ನು ತನ್ನ ಸದಸ್ಯರರು ಮತ್ತು ಚಳವಳಿಗಳ ಬೆಂಬಲಿಗರ ಮೂಲಕ ಒದಗಿಸುತ್ತದೆ. ಅಲ್ಲದೆ, ಅದನ್ನು ವರದಿ ಮಾಡುವವರು, ಅಧ್ಯಯನ ಮಾಡುವವರೂ ಈ ವಲಯದೊಳಗೆ ಸೇರುತ್ತಾರೆ. ಇವರು ತ್ವರಿತವಾಗಿ ಚಳವಳಿಯ ಸ್ಥಿತಿಯನ್ನು ವಿಶ್ಲೇಷಿಸಬಲ್ಲರು. ಇದು ಏಕತೆಯೇ? ಇದರ ಹಿಂದೆ ಒಂದು ಯೋಜನೆ ಇದೆಯೆ? ಇದು ಶಿಸ್ತನ್ನು ಹೊಂದಿದೆಯೆ? ಈ ತತ್ವಗಳನ್ನು ಒಂದು ಅಹಿಂಸಾತ್ಮಕ ಕಾರ್ಯದಲ್ಲಿ ಎರಕ ಹೊಯ್ದು ಕೊಂಡು ಹೋಗುವವರು ಈಗಾಗಲೇ ಒಂದು ಶಾಂತಿಯುತ ಜಗತ್ತನ್ನು ಬೆಳೆಸುತ್ತಾರೆ. ಭವಿಷ್ಯವು ಅದನ್ನು ನಿರಂತರವಾಗಿ ಮಾಡುವವರೇ ರೂಪಿಸುತ್ತಾರೆ.

---

[1]ಈ ಲೇಖನದ ಉದ್ದೇಶಕ್ಕಾಗಿ, ನಾನು "ಯಶಸ್ವೀ" ಚಳವಳಿಗಳನ್ನು ತಮ್ಮ ಆರಂಭಿಕ ಗುರಿಗಳನ್ನು ತಲುಪಿದ ಚಳವಳಿಗೆ ಹೇಳಿದ್ದೇನೆ. ಹಾಗೆಯೇ ವೈಫಲ್ಯದ ಚಳವಳಿಗಳು ಎನ್ನುವುದನ್ನು ತಮ್ಮ ಗುರಿ ತಲುಪದ ಚಳವಳಿಗಳಿಗೆ ಉದ್ದೇಶಿಸಿ ಹೇಳಿದ್ದೇನೆ. ಈ ವ್ಯಾಖ್ಯಾನದಲ್ಲೂ ತಾತ್ಕಲಿಕ ಅಂಶಗಳಿವೆ. ಒಂದು ಯಶಸ್ವೀ ಚಳವಳಿಯು ತನ್ನ ಆರಂಭಿಕ ಗುರಿ ತಲುಪದೆ ಇರಬಹುದು (ಅಂದರೆ 2004ರಲ್ಲಿ ಉಕ್ರೇನ್‌ನಲ್ಲಿ ನಡೆದ ಆರೆಂಜ್ ಚಳವಳಿ) ಆದರೆ ಚಳವಳಿಯ ಸಾಧನೆಗೆ ವ್ಯಾಪಕ ಬೆಂಬಲವು ವರ್ಷಾನುಗಟ್ಟಲೆ ಲಭ್ಯವಾಗಿದ್ದೂ ಇದೆ. (ಹೆಚ್ಚಿನ ವಿವರಗಳಿಗೆ 2010 ನವೆಂಬರ್ 17ರ ಉಕ್ರೇನ್ ಪ್ರಕರಣದ ಕುರಿತ ಲೇಖನ 'ದ ಸ್ಟ್ರಗಲ್ ಆಫ್ಟರ್ ಪೀಪಲ್ ಪವರ್ ವಿನ್ಸ್' ಓದಬಹುದು. ಒಲೆನಾ ಟ್ರೆಗಬ್ ಮತ್ತು ಆಕ್ಸಾನಾ ಶುಲ್ಯರ್ ಮುಕ್ತ ಪ್ರಜಾಪ್ರಭುತ್ವದ ಬಗ್ಗೆ ಇದನ್ನು ಬರೆದಿದ್ದಾರೆ.) ಮುಖ್ಯವಾಗಿ, ಒಂದು ಚಳವಳಿ ತನ್ನ ಉದ್ದೇಶಿತ ಗುರಿಯನ್ನು ತಲುಪಲು (ಅಂದರೆ 1989ರಲ್ಲಿ ಚೀನಾದ ಪ್ರಜಾಪ್ರಭುತ್ವ ಪರ ಚಳವಳಿ) ವಿಫಲವಾದಲ್ಲಿ, ಸಂಬಂಧಿತ ಪರಿಣಾಮಗಳನ್ನು ಭವಿಷ್ಯದ ವರ್ಷಗಳಲ್ಲಿ ರಚನಾತ್ಮಕವಾಗಿ ಚಳವಳಿಯ ಕಾರಣಗಳನ್ನು ಮುಂದೂಡಲಿದೆ. (ಹೆಚ್ಚಿನ ಮಾಹಿತಿಗೆ ಚೀನಾ ಮೇಲೆ 2010 ನವೆಂಬರ್ 17ರ ಲೇಖನ 'ರಿಪ್ರೆಶನ್ಸ್ ಪ್ಯಾರಡಾಕ್ಸ್ ಇನ್ ಚೀನಾ' ವನ್ನು ಲೆಸ್ಟರ್ ಕರ್ಟ್ಸ್ ಆನ್ ಓಪನ್ ಡೆಮಾಕ್ರಸಿ ಲೇಖನ ಓದಿ.) ನಿರ್ದಿಷ್ಟ ಚಳವಳಿಯನ್ನು 'ಯಶಸ್ವೀ' ಅಥವಾ 'ವಿಫಲ' ಎಂಬ ವರ್ಗೀಕರಣಯನ್ನು ಬದಲಿಸಲು ಸಾಧ್ಯವಿಲ್ಲ ನಿಜ. ಇದರ ನೇರ ಪರಿಣಾಮಗಳು ಶಕ್ತಿಯುತವಾಗಿರಬಹುದು ಮತ್ತು ಹಾಗೆ ತಮ್ಮದೇ ರೀತಿಯಲ್ಲಿ ಗಮನಾರ್ಹವಾಗಿರಬಹುದು.